ಶ್ರೀ ಎಂ.ಎಂ.ಜೆ. ಸದ್ಯೋಜಾತ.—ಒಂದೇ ಕೆರೆಗೆ ಒಂದು ಅಥವಾ ಅದಕ್ಕಿಂತ ಹೆಚ್ಚು ಸಲ ರಿಪೇರಿ ಅಥವಾ ಹೂಳು ತೆಗೆಸುವ ಕ್ರಮ ಕೈಗೊಂಡಿರಬಹುದಲ್ಲವೇ?

ಶ್ರೀ ಡಿ.ಟಿ. ರಾಮು.—ತಮ್ಮ ಉತ್ತರದಲ್ಲಿ ರಿಪೇರಿಗೆ ತೆಗೆದುಕೊಂಡ ಕೆರೆಗಳು ೭೮-೭೯ ರಲ್ಲಿ ೪೬, ೭೯-೮೦ ರಲ್ಲಿ ೬೧ ಮತ್ತು ೮೦-೮೧ ರಲ್ಲಿ ೫೪ ಕೆರೆಗಳೆಂದು ಹೇಳಿದ್ದೀರಿ. ಇವು ಮೂರನ್ನೂ ಕೂಡಿದರೆ ೧೬೧ ಕೆರೆಗಳಾಗುತ್ತವೆ.

ಶ್ರೀ ಎಂ.ಎಂ.ಜೆ. ಸದ್ಯೋಜಾತ.—ಒಂದೇ ಕೆರೆಗೆ ಎರಡು ಸಾರಿ ರಿಪೇರಿ ಆಗಿರಬಹುದು.

ಅಧ್ಯಕ್ಷರು.—ಕೂಡಿದರೆ ತಪ್ಪಾಗುತ್ತದೆ.

ಶ್ರೀ ಡಿ.ಟಿ. ರಾಮು.—ಇಲ್ಲಿ ಕೊಟ್ಟಿರತಕ್ಕ ಅಂಕಿಅಂಶಗಳು ಸುಳ್ಳು ಇರುವ ಹಾಗೆ ಕಾಣುತ್ತದೆ. ಕೇವಲ ೧೦-೧೨ ಕೆರೆಗಳು ರಿಪೇರಿಯಾಗಿರಬಹುದು. ಈ ಸದನವನ್ನು ತಪ್ಪುದಾರಿಗೆ ಎಳೆಯುತ್ತಿದ್ದೀರೆಂದು ಭಾಸವಾಗುತ್ತಿದೆ.

ಶ್ರೀ ಎಂ.ಎಂ.ಜೆ. ಸದ್ಯೋಜಾತ.—ನೀವು ಕೇಳಿರುವ ಪ್ರಶ್ನೆಗಳಿಗೆ ಸರಿಯಾದಂತಹ ಉತ್ತರಗಳನ್ನೇ ಒದಗಿಸಿದ್ದೇನೆ.

ಶ್ರೀ ಶೀರ್ನಳ್ಳಿ ಚಂದ್ರಶೇಖರ್.—ಇದಕ್ಕೆ ಕಮಿಷನ್ ನೇಮಕ ಮಾಡಬೇಕೇನೋ.

ಶ್ರೀ ಡಿ.ಟಿ. ರಾಮು.—ಕೋಡಂಬಳ್ಳಿ ಕೆರೆಗೆ ಹೂಳು ತೆಗೆಯಬೇಕೆಂದು, ೩ ವರ್ಷವಾದರೂ ಆ ಕೆಲಸ ಆಗಿಲ್ಲ. ೩ ವರ್ಷದಲ್ಲಿಯೇ ಹಣ ಬಡ್ಜೆಟ್‌ನಲ್ಲಿ ಸ್ಯಾಂಕ್ಷನ್ ಆಗಿದೆ.

ಶ್ರೀ ಎಂ.ಎಂ.ಜೆ. ಸದ್ಯೋಜಾತ.—ಅದು ಈಗ ಬಡ್ಜೆಟ್‌ನಲ್ಲಿ ಸೇರಿದ್ದರೆ ಆ ಬಗ್ಗೆ ಸರ್ಕಾರ ವಿಚಾರ ಮಾಡುತ್ತದೆ.

ಶ್ರೀ ಡಿ.ಟಿ. ರಾಮು.—ಅದು ಸೇರಿದೆ.

ಶ್ರೀ ಎಂ.ಎಂ.ಜೆ. ಸದ್ಯೋಜಾತ.—ಅದು ಸೇರಿದ್ದರೆ ಅದನ್ನು ಸ್ಯಾಂಕ್ಷನ್ ಮಾಡಿ ಕಳುಹಿಸುತ್ತೇವೆ.
ಶ್ರೀ ಡಿ.ಟಿ. ರಾಮು.—ಅದನ್ನು ತೆಗೆದುಕೊಳ್ಳುವ ಬಗ್ಗೆ ಆಶ್ವಾಸನೆ ಕೊಡುತ್ತೀರಾ?
ಶ್ರೀ ಎಂ.ಎಂ.ಜೆ. ಸದ್ಯೋಜಾತ.—ತೆಗೆದುಕೊಳ್ಳುತ್ತೇವೆ ಸ್ವಾಮಿ.

Auditing of TAPCMS Sira in Tumkur District.

208. SHRI T.B. JAYACHANDRA (Kallambella).—Will the Minister for Co-operation be pleased to state.—

(*a*) whether accounts of the TAPCMS Sira in Tumkur District have not been audited from the last 3 years;

(*b*) if so, the reasons for postponement;

(*c*) whether it is a fact that an amount of Rs. 14 lakhs has been misappropriated in this society;

(*d*) whether any responsibility has been fixed against anybody for this;

(*e*) whether Government intend to take civil and criminal action against the delinquent persons?

SRI H.C. SRIKANTAIAH.—Minister for Co-operation.

(*a*) Not audited.

(*b*) Non-submission of audited financial statement and audit report for the year 1976-77 by the concerned Auditor of the Department.

(*c*) As per audit report for the year 1975-76, a sum of Rs. 27,201,12 is alleged to have been misappropriated.

(*d*) Responsibility has been fixed.

(*e*) Civil and criminal action has already been taken.

ಶ್ರೀ ಟಿ.ಬಿ. ಜಯಚಂದ್ರ.—ಅಧ್ಯಕ್ಷರೆ, ಅನುಭವಶಾಲಿಗಳಾದ ಮಂತ್ರಿಗಳು ನನ್ನ ಪ್ರಶ್ನೆಗೆ ಬಹಳ ವೇಗ್ ಆಗಿ ಉತ್ತರ ಕೊಟ್ಟಿದ್ದಾರೆ. ನಾನು ಪ್ರಶ್ನೆ ಕೇಳಿದ್ದೇ ಒಂದು. "Who are responsible for the missappropriation?" ಎಂದು ನಾನು ಪ್ರಶ್ನೆ ಕೇಳಿದ್ದನ್ನು ಇವರು ಚೇಂಜ್ ಮಾಡಿ "Whether any responsibility has been fixed against anybody for this?" ಎಂದು ಪ್ರಶ್ನೆ ಪ್ರಿಂಟ್ ಮಾಡಿ ಅದಕ್ಕೆ ಉತ್ತರವನ್ನು ಕೊಟ್ಟಿರುತ್ತಾರೆ. ನಾವು ಪ್ರಶ್ನೆಯನ್ನು ಏತಕ್ಕೆ ಕೇಳಬೇಕು ಸ್ವಾಮಿ? ಇದಕ್ಕೆ ನನ್ನ ವಿರೋಧ ಇದೆ ಸ್ವಾಮಿ. ಇದು ನನ್ನ ಪ್ರಶ್ನೆ ಅಲ್ಲ.

ಅಧ್ಯಕ್ಷರು.—ತಾವು ಕಳುಹಿಸಿರುವ ಪ್ರಶ್ನೆಗೆ ಉತ್ತರ ಬೇರೆ ಇದೆಯೇ?

ಶ್ರೀ ಟಿ.ಬಿ. ಜಯಚಂದ್ರ.—ಸ್ವಲ್ಪ ಚೇಂಜ್ ಮಾಡಿ ಕೊಟ್ಟಿದ್ದಾರೆ ಸ್ವಾಮಿ. ನಾನು ಪ್ರಶ್ನೆ ಕೇಳಿ ಎರಡು ವರ್ಷವಾಯಿತು. ೩ ವರ್ಷದ ಅಕೌಂಟ್ ಆಡಿಟ್ ಆಗಿಲ್ಲದಿರುವುದಕ್ಕೆ ಕಾರಣ ಆಡಿಟರ್ ಪೋಸ್ಟ್ ಆಗಿಲ್ಲ ಎಂದು ಹೇಳುತ್ತೀರಿ. ಆಡಿಟರ್ ಪೋಸ್ಟ್ ಮಾಡಿ ಯಾವ ವರ್ಷದಲ್ಲಿ ಕೆಲಸ ಮುಗಿಸುತ್ತೀರಿ ಸ್ವಾಮಿ?

ಶ್ರೀ ಎಚ್.ಸಿ. ಶ್ರೀಕಂಠಯ್ಯ.—ಅಧ್ಯಕ್ಷರೇ, ೭೩-೭೪ ರಲ್ಲಿ, ೭೪-೭೫ ರಲ್ಲಿ, ೭೫-೭೬ ರಲ್ಲಿ ಆಡಿಟ್ ಆಗಿರುತ್ತದೆ. ೭೩-೭೪ ರಲ್ಲಿ ೨೫,೧೪೪ ರೂಪಾಯಿಗಳು, ೭೪-೭೫ ರಲ್ಲಿ ೧೪,೨೫೪ ರೂಪಾಯಿಗಳು; ೭೫-೭೬ ರಲ್ಲಿ ೨೭,೨೧೧ ರೂಪಾಯಿಗಳು ಮಿಸ್‌ಅಪ್ರೋಪ್ರಿಯೇಷನ್ ಆಗಿರುವುದು ಆಡಿಟ್‌ನಿಂದ ಕಂಡುಬಂದಿದೆ. ಒಟ್ಟು ೬೬,೬೦೦ ರೂಪಾಯಿಗಳಿದ್ದು ಇದರಲ್ಲಿ ೯,೦೧೧ ರೂಪಾಯಿ ವಸೂಲಾಗಿದೆ. ೫೭,೫೮೮ ರೂಪಾಯಿಗಳು ಬಾಕಿ ಬರಬೇಕಾಗಿದೆ. ಸುವಾರು ೧೪ ಜನರ ಮೇಲೆ ರಿಪೋರ್ಟ್ ಬಂದಿದೆ. ಈಗ ೧೧ ಕೇಸ್‌ಗಳನ್ನು ಹಾಕಲಾಗಿದೆ. ಸಿವಿಲ್ ಸೈಡ್‌ನಲ್ಲಿ ೧೧ ಕ್ರಿಮಿನಲ್ ಸೈಡ್‌ನಲ್ಲಿ ೩ ಕೇಸ್‌ಗಳನ್ನು ಧಾಖಲು ಮಾಡಲಾಗಿದೆ. ಉಳಿದವುಗಳ ಬಗ್ಗೆ ಸರ್ಕಾರ ರಿಪೋರ್ಟ್ ನಿರೀಕ್ಷೆ ಮಾಡುತ್ತಿದೆ.

ಶ್ರೀ ಟಿ.ಬಿ. ಜಯಚಂದ್ರ.—ನಾನು ನೇರವಾಗಿ ಆರೋಪ ಮಾಡುವುದಕ್ಕೆ ಇಷ್ಟಪಡುತ್ತೇನೆ. ಆಡಿಟರ್ ಸ್ಟೇಟ್‌ಮೆಂಟ್ ಕೊಟ್ಟಿಲ್ಲ ಎನ್ನುವ ದೃಷ್ಟಿಯಿಂದ ಮುಂದೂಡಲಾಗಿದೆ ಎಂದರೆ ನಿಮ್ಮ ಇಲಾಖೆಯವರೂ ಹಾಗೂ ಪ್ರೈವೇಟ್ ಪೀಪಲ್ಸ್ ಜೊತೆ ಕೊಲ್ಯೂಡ್ ಆಗಿದ್ದಾರೆ ಎಂದೆನಿಸುತ್ತದೆ. ಈ ರೀತಿ ಕಲ್ಯೂಡ್ ಆಗಿರುವವರನ್ನು ಕಂಡುಹಿಡಿದು ಅವರನ್ನು ಸಸ್ಪೆಂಡ್ ಮಾಡಿ ಅವರ ಮೇಲೆ ಕ್ರಮ ಕೈಗೊಳ್ಳುತ್ತೀರಾ?

ಶ್ರೀ ಎಚ್.ಸಿ ಶ್ರೀಕಂಠಯ್ಯ.—ಮಾನ್ಯ ಸದಸ್ಯರು ಆ ಬಗ್ಗೆ ಸರಿಯಾದ ಮಾಹಿತಿ ಕೊಟ್ಟಲ್ಲಿ ಸರ್ಕಾರ ಆ ಬಗ್ಗೆ ಕ್ರಮ ತೆಗೆದುಕೊಳ್ಳುತ್ತದೆ.

ಶ್ರೀ ಟಿ.ಬಿ. ಜಯಚಂದ್ರ.—ನಾನು ಕೇಳುತ್ತಿರುವುದು ಕಳೆದ ೩ ವರ್ಷಗಳಲ್ಲಿ ಲೆಕ್ಕ ಪರಿಶೋಧನೆ ಮಾಡಿಲ್ಲದಿರುವ ವಿಷಯ. ಇನ್ನಾದರೂ ಈ ಲೆಕ್ಕವನ್ನು ಪರಿಶೋಧಿಸಲು ಎಷ್ಟು ದಿನ ತೆಗೆದುಕೊಂಡು ಮುಗಿಸುತ್ತೀರಾ ಎಂದು ಕೇಳುತ್ತೇನೆ.

ಶ್ರೀ ಎಚ್.ಸಿ. ಶ್ರೀಕಂಠಯ್ಯ.—ಆದಷ್ಟು ಜಾಗ್ರತೆ ಮುಗಿಸುತ್ತೇವೆ.

ಶ್ರೀ ಟಿ.ಬಿ. ಜಯಚಂದ್ರ.—ಆದಷ್ಟು ಜಾಗ್ರತೆ ಎಂದರೆ ೧೦ ವರ್ಷ ಆಗಬಹುದು ಸ್ವಾಮಿ. ನಿರ್ದಿಷ್ಟವಾಗಿ ಇಷ್ಟೇ ದಿವಸ ಎಂದು ಹೇಳಿದರೆ ತಮಗೂ ಗೌರವ ಬರುತ್ತದೆ ನಮಗೂ ಗೌರವ ಬರುತ್ತದೆ ಸ್ವಾಮಿ.

ಶ್ರೀ ಎಚ್.ಸಿ. ಶ್ರೀಕಂಠಯ್ಯ.—ಇಬ್ಬರಿಗೂ ಗೌರವ ಉಳಿದುಕೊಳ್ಳುವ ಹಾಗೆ ಪ್ರಯತ್ನ ಮಾಡುತ್ತೇನೆ.

ಶ್ರೀ ಟಿ.ಬಿ. ಜಯಚಂದ್ರ.—ಬಹಳ ಜನರನ್ನು ಸಸ್ಪೆಂಡ್ ಮಾಡಬೇಕಾಗುತ್ತದೆ ಸ್ವಾಮಿ.

MR. SPEAKER.—Why do you doubt those things?

Working of Karnataka Silk Co-operative Marketing Federation

403 SRI G. RAJU GOWDA (Hanur).—Will the Minister for Co-operation be pleased to state.

(a) the amount due from ex and present Board of Directors of Karnataka Silk Co-operative Marketing Federation ;

(b) why suitable action has not taken for the recovery of the dues though it is pending a long time ;

(c) whether it has come to the notice of the Government that the federation is financing loan out of its funds by mortgaging the silk to some members whenever they were in need of money which resulted loss to the federation ;

(d) whether action has been taken under section 64 (of the Co-operative Societies Act) for the irregularity of the Federation and reasons for not not publishing the report ?

SRI H. C. SRIKANTAIAH.— Minister for Co-operation.

(a) The amount of Rs. 1.32.540-35 upto 1975-1979 and the amount of Rs. 1,66,739-51 upto 1979-1981 are outstanding from the ex and present Board of Directors of the Karnataka Silk Co operative Marketing Federation * ;

(b) Suitable action was not taken as the ex and present Board of Directors had given an assurance saying that they will return the out-standing dues early. Now the action has been taken to recover the amount from the ex directors.

(c) No.

(d) Action was not taken under section (64) of the Co-operative Secieties Act. as the Federations had not maintained the Accounts Book properly and no audit was conducted since two years. Now audit has been completed till the year 1978-79. Now action is taken to continue the investigation duly completing the writing up of accounts books.

---

* Vide Lib on 11 dated 30-6-1981